**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 69/2023**

**ಚಾ.ಸಾಃ 20, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ತಿಮ್ಮಪ್ಪ ನಾಯ್ಕ |
| ತಂದೆಯ ಹೆಸರು | ವೆಂಕಪ್ಪ ನಾಯ್ಕ |
| ವಯಸ್ಸು | 51 ವರ್ಷ |
| ಉದ್ಯೋಗ | ವೃತ್ತ ನಿರೀಕ್ಷಕರು, ಸೂಳ್ಯ ವೃತ್ತ |
| ವಾಸ್ತವ್ಯ | ಸೂಳ್ಯ |

**ಸಾಕ್ಷಿಯನ್ನು ದಿನಾಂಕಃ 06-12-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 24-06-2023 ರಿಂದ 21-09-2023 ರವರೆಗೆ ನಾನು ಹೊನ್ನಾವರ ವೃತ್ತದ ಪ್ರಭಾರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 24-06-2023 ರಂದು ಕೇಸಿನ ಕಡತವನ್ನು ಚಾಸಾ-19 ರವರಿಂದ ಪಡೆದುಕೊಂಡಿರುತ್ತೇನೆ. ದಿನಾಂಕ 20-09-2023 ರಂದು ಪ್ರಕರಣದಲ್ಲಿ ಅಪಘಾತಪಡಿಸಿದ ಬೈಕ್ ಸಂಖ್ಯೆಕೆಎ-47/ಇ-7741 ರ ಮಾಲೀಕರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಉತ್ತರವನ್ನು ಪಡೆದಿರುತ್ತೇನೆ. ಈಗ ಅವುಗಳನ್ನು ನೋಡುತ್ತಿದ್ದು ನಿಪಿ-8 ಮತ್ತು 9 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಮತ್ತು 9(ಎ) ಎಂದು ಗುರುತಿಸಲಾಯಿತು.

ಅದೇ ದಿನ 1 ನೇ ಆರೋಪಿ ಠಾಣೆಗೆ ಹಾಜರಾಗಿದ್ದರಿಂದ ಆತನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 21-09-2023 ರಂದು ಕೇಸಿನ ಕಡತವನ್ನು ಚಾಸಾ-21 ರವರಿಗೆ ವಹಿಸಿರುತ್ತೇನೆ.

1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ. ಜಿ. ಯವರಿಂದಃ**

ಬೈಕ್ ಮಾಲೀಕರಿಗೆ ನಾನು ಯಾವುದೇ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ಮಾಲೀಕರು ನನಗೆ ಯಾವುದೇ ಉತ್ತರ ನೀಡಿರುವುದಿಲ್ಲ, ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**